

# ಜೀನ್ ಥೆರಪಿ

**ಆನುವಂಶಿಕವಾಗಿ ಬರುವ ಕಣ್ಣಿನ ಸಮಸ್ಯೆಗಳಿಗೆ ಜೀನ್ ಥೆರಪಿ ಮೂಲಕ ಶಾಶ್ವತ ಪರಿಹಾರ ಕಂಡುಕೊಳ್ಳುವ ಸಲುವಾಗಿ ಬೆಂಗಳೂರಿನ ನಾರಾಯಣ ನೇತ್ರಾಲಯ ಹೊಸ ಸಾಹಸಕ್ಕೆ ಕೈಹಾಕಿದೆ.**

■ **ಉಮಾ ವೇಣೂರು**

ಕಣ್ಣುಗಳಿಗೆ ಆನುವಂಶೀಯವಾಗಿ ಬರುವ ತೊಂದರೆಗಳಲ್ಲಿ ಕಾರ್ನಿಯಾ ಸಮಸ್ಯೆ, ಕೆರಟೊಕೋನಸ್ ಮುಂತಾದವು ಪ್ರಮುಖವಾದವು. ಇಂಥ ಆನುವಂಶಿಕ ತೊಂದರೆಗಳನ್ನು ಜೀನ್ ಥೆರಪಿ ಮೂಲಕ ಪರಿಹರಿಸಬಹುದು.

'ಜೀನ್ ಥೆರಪಿ ಇಂದಿನ ಅಗತ್ಯ. ನಮ್ಮ ದೇಶದಲ್ಲಿ ಸುಮಾರು 70 ಲಕ್ಷ ಮಂದಿ ಕಣ್ಣಿಗೆ ಸಂಬಂಧಿಸಿದ ವಿರಳ ಕಾಯಿಲೆಗಳಿಂದ ಬಳಲುತ್ತಿದ್ದಾರೆ. ಇವುಗಳಿಗೆ ಜೀನ್ ಥೆರಪಿಯೇ ಸೂಕ್ತ. ಕಣ್ಣುಗಳ ಮಾಂಸಖಂಡಗಳಲ್ಲಿ ಸಮಸ್ಯೆ, ವಯೋಸಂಬಂಧಿ ಸಮಸ್ಯೆ, ಕಾರ್ನಿಯಾ ಡಿಸ್ಟ್ರೊಫಿ, ಕೆರಟೊಕೋನಸ್ ಸಮಸ್ಯೆಗಳಿಗೆ ಜೀನ್ ಥೆರಪಿಯಿಂದ ಶಾಶ್ವತ ಪರಿಹಾರ ಸಾಧ್ಯ ಎನ್ನುತ್ತಾರೆ ಬೆಂಗಳೂರಿನ ನಾರಾಯಣ ನೇತ್ರಾಲಯದ ಅಧ್ಯಕ್ಷ ಡಾ. ರೋಹಿತ್ ಶೆಟ್ಟಿ.

'ಜೀನ್ ಥೆರಪಿ ಭಾರತದಲ್ಲಿ ಹೊಸತು. ಪಾಶ್ಚಾತ್ಯ ದೇಶಗಳಲ್ಲಿ ಕಳೆದ 30 ವರ್ಷಗಳಿಂದ ಇದು ಪ್ರಚಲಿತದಲ್ಲಿದೆ. ಆದರೆ ಇದಕ್ಕೆ ಕೋಟ್ಯಂತರ ರೂಪಾಯಿ ವ್ಯಯಿಸಬೇಕಾಗಿದೆ. ಸದ್ಯ ನಾರಾಯಣ ನೇತ್ರಾಲಯದಲ್ಲಿ ಕೆರಟೊಕೋನಸ್‌ಗೆ ಜೀನ್ ಥೆರಪಿಯ ಕ್ಲಿನಿಕಲ್ ಟ್ರಯಲ್ ನಡೆಯುತ್ತಿದ್ದು, ಇದು ಯಶಸ್ವಿಯಾದರೆ ದೇಶದ ಮೊದಲ ಜೀನ್ ಥೆರಪಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ. ಜೊತೆಗೆ ಸ್ಥಳೀಯವಾಗಿ ಅಭಿವೃದ್ಧಿಪಡಿಸಿದ ತಂತ್ರಜ್ಞಾನದಿಂದ ಜೀನ್ ಥೆರಪಿ ಇಲ್ಲಿ ತುಂಬ ದುಬಾರಿಯಾಗಲಾರದು' ಎನ್ನುತ್ತಾರೆ ನಾರಾಯಣ ನೇತ್ರಾಲಯದಲ್ಲಿ ಗ್ರೋ ರಿಸರ್ಚ್ ಫೌಂಡೇಶನ್‌ನ ಮುಖ್ಯಸ್ಥ ಡಾ. ಅರ್ಕಸುಬ್ರ ಘೋಷ್.

'ಜೀನ್ ಥೆರಪಿ ನೀಡಲು ಒಳ್ಳೆಯ ವೈರಸ್ ಬೇಕು. ಈ ಒಳ್ಳೆಯ ವೈರಸ್ ಅನ್ನು ಸಮಸ್ಯೆ ಇರುವ ಕಣ್ಣಿನ ಭಾಗಕ್ಕೆ ಇಂಜೆಕ್ಟ್ ಮಾಡುವ ಮೂಲಕ ಚಿಕಿತ್ಸೆ ನೀಡಲಾಗುತ್ತದೆ. ಈ ವೈರಸ್ ದೇಹಕ್ಕೆ ಹಾನಿ ಮಾಡುವ ಅಂಶವನ್ನು ತೆಗೆದುಹಾಕುತ್ತದೆ. ಒಂದು ಒಳ್ಳೆಯ ವೈರಸ್ ಅನ್ನು ದೇಹದೊಳಗೆ ಸೇರಿಸಬೇಕಾದರೆ ಒಂದು ಮಾಧ್ಯಮ ಬೇಕು.



ನಾರಾಯಣ ನೇತ್ರಾಲಯದ ಅಧ್ಯಕ್ಷ ಡಾ. ರೋಹಿತ್ ಶೆಟ್ಟಿ

ಇದೇ ಜೀನ್ ಥೆರಪಿ' ಎಂದು ವಿಶ್ಲೇಷಿಸುತ್ತಾರೆ ಈ ವೈದ್ಯರು.

'ಜೀನ್‌ಗಳಲ್ಲಿರುವ ರೂಪಾಂತರಗಳು ಮಕ್ಕಳು ಹಾಗೂ ವೃದ್ಧರಲ್ಲಿ ಆನುವಂಶಿಕ ಕಾಯಿಲೆಗಳನ್ನು ಉಂಟುಮಾಡುತ್ತವೆ. ರೆಟಿನೈಟಿಸ್, ಪಿಗ್ಮೆಂಟೋಸಾ, ಸ್ಟಾರ್ಗಾರ್ಟ್ ಕಾಯಿಲೆ, ಸಿಕೆಲ್‌ಸೆಲ್ ಅನೀಮಿಯಾ ಮುಂತಾದ ಕಾಯಿಲೆಗಳು ದೃಷ್ಟಿದೋಷಕ್ಕೆ ಕಾರಣವಾಗುತ್ತವೆ. ಜೊತೆಗೆ ಕೆರಟೊಕೋನಸ್‌ನಂತಹ ದೃಷ್ಟಿ ಸಮಸ್ಯೆ ಹದಿವಯಸ್ಸಿನವರನ್ನೂ ಕಾಡುತ್ತದೆ. ಇಂತಹ ಸಮಸ್ಯೆಗಳಿಗೆ ಜೀನ್ ಥೆರಪಿ ಪ್ರಯೋಜನಕಾರಿ' ಎಂದು ಹೇಳುತ್ತಾರೆ ನಾರಾಯಣ ನೇತ್ರಾಲಯದಲ್ಲಿ ನೇತ್ರ ವೈದ್ಯರಾಗಿರುವ ಡಾ. ನರೇನ್.

'ಕಣ್ಣಿನ ಕಾಯಿಲೆಗಳಿಗೆ ಸಂಬಂಧಿಸಿದ ಜೀನ್ ಥೆರಪಿ ಬಹಳ ದುಬಾರಿಯಾಗಿರುವ ಕಾರಣ ಸ್ಥಳೀಯವಾಗಿ ಅಭಿವೃದ್ಧಿಪಡಿಸಿದ ಎಎವಿ ವೆಕ್ಟರ್‌ಗಳನ್ನು ಬಳಸಿಕೊಂಡು ಗ್ರೋ ಲ್ಯಾಬ್ ಮಾನವ ಕ್ಲಿನಿಕಲ್ ಪ್ರಯೋಗಗಳನ್ನು ನಡೆಸುತ್ತಿದೆ. ಇದರಿಂದ ನಮ್ಮ ದೇಶದ ರೋಗಿಗಳಿಗೆ ಕೈಗಟಕುವ ದರದಲ್ಲಿ ಚಿಕಿತ್ಸೆ ನೀಡುವ ಪ್ರಯತ್ನ ನಮ್ಮದು' ಎನ್ನುತ್ತಾರೆ ಅವರು.

'ಜೀನ್ ಥೆರಪಿ' ಬಗ್ಗೆ ಮಾಹಿತಿಗೆ
**080 66660715**
ಇಮೇಲ್ **genetictest@**
**narayananethralaya.com**